

ನಮ್ಮ ಉಡುಪಿನ ಬಣ್ಣಕ್ಕೆ ತಕ್ಕಂತೆ ಉಗುರನ್ನು ಅಲಂಕರಿಸಿಕೊಂಡರೆ ನೋಡಲು ಆಕರ್ಷಕವಾಗಿ ಕಾಣಬಹುದು. ಈ ಚಿತ್ತಾರಕ್ಕೆ ಬಳಸುವ ಉತ್ಪನ್ನಗಳಿಂದ ಯಾವುದೇ ಅಡ್ಡಪರಿಣಾಮವೂ ಇಲ್ಲ.



ಉಮಾ ಜಯಕುಮಾರ್
ಬ್ಯೂಟಿಶಿಯನ್

# ಉಗುರಿನ ಚಿತ್ತಾರ



ಕೈಗಳ ಅಂದವನ್ನು ಹೆಚ್ಚಿಸಲು ಉಗುರಿನ ಮೇಲೆ ನಾನಾ ತರದ ಚಿತ್ತಾರ ಮಾಡಬಹುದು. ನೀಳವಾದ ಬೆರಳುಗಳ ಮೇಲೆ ನೀಟಾಗಿ ಶೇಪ್ ಕೊಟ್ಟ ಉಗುರುಗಳಿಗೆ ಕಲಾತ್ಮಕ ಟಚ್ ಕೊಟ್ಟರೆ ಸೌಂದರ್ಯ ಇಮ್ಮಡಿಸುತ್ತದೆ.

ಉಗುರುಗಳ ಮೇಲೆ ವಿವಿಧ ವಿನ್ಯಾಸ ಮಾಡಿದರೆ ನೋಡಲು ಸುಂದರವಾಗಿರುತ್ತದೆ. ಕೆಲವೊಂದು ಕಲೆಯನ್ನು ವೃತ್ತಿಪರರು (ಪ್ರೊಫೆಷನಲ್ಸ್) ಬ್ಯೂಟಿ ಪಾರ್ಲರ್‌ಗಳಲ್ಲಿ ಮಾಡುತ್ತಿದ್ದಾರೆ. ಇಂಥದೇ ಒಂದು ವಿಧಾನ 'ಸ್ಟಾಂಪಿಂಗ್ ನೈಲ್ ಆರ್ಟ್'.

ಇದನ್ನು ಮಾಡಲು ಹೆಚ್ಚಿನ ಯಾವುದೇ ತರಬೇತಿಯ ಅಗತ್ಯವಿಲ್ಲ; ಜತೆಗೆ ಎಲ್ಲರಿಗೂ ಕೈಗೆಟಕುವ ದರದಲ್ಲಿ ಲಭ್ಯವಿದೆ.



ಒಂದು ಸಲ ನೈಲ್ ಆರ್ಟ್‌ನ ಅಚ್ಚನ್ನು ಕೊಂಡು ತಂದರೆ ನಮ್ಮ ಬಳಿ ಇಟ್ಟುಕೊಂಡು ಬೇಕೆನಿಸಿದಾಗ ನಮಗೆ ಇಷ್ಟವಾದ ಡಿಸೈನನ್ನು ಬಹು ಬೇಗ ಮಾಡಿಕೊಳ್ಳಬಹುದು.





ವಿಧಾನ: ಮೊದಲು ನಮಗೆ ಇಷ್ಟವಾದ ರೆಗ್ಯೂಲರ್ ಉಗುರಿನ ಪಾಲಿಶ್ ಹಚ್ಚಬೇಕು. ನಂತರ ಸ್ಟ್ಯಾಂಪಿಂಗ್ ನೈಲ್ ಆರ್ಟ್‌ನ ನೈಲ್ ಪಾಲಿಶ್ ಮೇಲೆ ಇಷ್ಟವಾದ ಡಿಸೈನ್‌ಗೆ ಹಾಕಿ ನಂತರ ಸ್ಟಾಂಪರ್ ಅನ್ನು ಅದರ ಮೇಲೆ ಒತ್ತಬೇಕು. ನಂತರ ಅದರ ಮೇಲೆ ಟ್ರಾನ್ಸ್‌ಫರೆಂಟ್ ಆಗಿರುವ ಉಗುರು ಬಣ್ಣವನ್ನು ಹಚ್ಚಬೇಕು. ಬೇಕಿದ್ದಲ್ಲಿ ಸಣ್ಣ ಹರಳುಗಳಿಂದ ಅಲಂಕರಿಸಬಹುದು. ನಮ್ಮ ಉಡುಪಿನ ಬಣ್ಣಕ್ಕೆ ತಕ್ಕಂತೆಯೂ ಉಗುರನ್ನು ಅಲಂಕರಿಸಿಕೊಳ್ಳಬಹುದು.

ಉಗುರು ಅಗಲವಾಗಿ, ಉದ್ದವಾಗಿ, ಒಳ್ಳೆಯ ಆಕಾರ ಇದ್ದರೆ ಉಗುರು ಕಲೆ ತುಂಬಾ ಚೆನ್ನಾಗಿ ಬರುತ್ತದೆ. ನೋಡಲು ಅಂದವಾಗಿರುತ್ತದೆ. ಇದರಿಂದ ಯಾವುದೇ ಅಡ್ಡ ಪರಿಣಾಮವೂ ಇಲ್ಲದಿರುವುದರಿಂದ ಎಲ್ಲಾ ವಯಸ್ಸಿನವರೂ ಉಪಯೋಗಿಸಬಹುದು. ■